**ಪ್ರಧಾನ ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುರಪುರ**
**ಸಾಃಸುರಪುರ**

ಓಎಸ್ ನಂ.151/2023
ಪಿ.ಡಬ್ಲ್ಯೂ 1

**ದಿನಾಂಕ 24-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಎಲ್.ಪಿ ನ್ಯಾಯವಾದಿಗಳಿಂದ.**

ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಒಂದು ಎಕರೆ ಜಮೀನು ಇರುತ್ತದೆ. ಅದರಲ್ಲಿ ಈ ವರ್ಷ ತೊಗರೆ ಬೆಳೆಯ್ನು ಹಾಕಿದ್ದೇನೆ. ಜಮೀನಿನಿಂದ ಒಂದು ವರ್ಷಕ್ಕೆ ಖರ್ಚು ತೆಗೆದು 10 ಸಾವಿರ ಉಳಿಯುತ್ತದೆ. ನನ್ನ ಜಮೀನಿನಲ್ಲಿ ಕೆಲಸ ಇಲ್ಲದೇ ಇದ್ದಾಗ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಬೇರೆ ಹೊಲಗಳಲ್ಲಿ ಕೂಲಿ ಕೆಲಸ ಮಾಡಿದರೆ ಪ್ರಸ್ತುತ ಒಂದು ದಿನಕ್ಕೆ ರೂ.150 ಕೊಡುತ್ತಾರೆ. 10-12 ವರ್ಷಗಳ ಹಿಂದೆ ಕೂಲಿ ಕೆಲಸ ಮಾಡಿದ್ದಲ್ಲಿ ರೂ.60 ಕೂಲಿ ಕೊಡುತ್ತಿದ್ದರು. ನನಗೆ 4 ಜನ ಮಕ್ಕಳು ಇರುತ್ತಾರೆ. ಅವರನೆಲ್ಲ ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. 10-12 ವರ್ಷಗಳ ಹಿಂದೆ ನನ್ನ ಮಕ್ಕಳು ಚಿಕ್ಕವರು ಇದ್ದರು ಎಂದರೆ ಸರಿ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಬಂದಂತಹ ಕೂಲಿ ಮನೆಯ ಖರ್ಚಿಗೆ ಸಾಲುತ್ತಿರಲಿಲ್ಲ ಎಂದರೆ ಸರಿ. ನಾನು ಕೊಡುವ ತೆಗೆದುಕೊಳ್ಳುವ ವ್ಯವಹಾರವನ್ನು ಮಾಡಿಲ್ಲ. ಪ್ರತಿವಾದಿಗೆ ನೋಟೀಸ ಕೊಟ್ಟು ವರ್ಷದ ಮೇಲೆ ಆಗಿದೆ. ನೋಟೀಸನಲ್ಲಿ ಒಪ್ಪಂದ ಆದ ದಿನಾಂಕವನ್ನು 31-12-2012 ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮಗಳ ಮದುವೆಗೆಂದು ಬೇರೆಯವರ ಮುಖಾಂತರ ಹಣವನ್ನು ನನ್ನ ಬಳಿ ಕೇಳಿದ್ದಾರೆ. ಒಪ್ಪಂದ ಪತ್ರದಲ್ಲಿ ಪ್ರತಿವಾದಿ ಯಾವಾಗ ಹಣ ಕೊಡುತ್ತಾರೋ ಆಗ ಜಮೀನು ಬಿಟ್ಟು ಕೊಡಬೇಕೆಂದು ಮಾತುಕತೆ ಆಗಿತ್ತು. ಜಮೀನು ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ.

ನಾನು ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರನ ಸಹಿಯಾಗಿ ಸಹಿ ಮಾಡಲು ಪ್ರತಿವಾದಿಯನ್ನು ಕರೆಸಿ ದಾಖಲೆ ಮೇಲೆ ಸಹಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು 2 ವರ್ಷ ಮಾತ್ರ ನಾವು ಮಾಡಿದ್ದೇವೆ. ಆದಾದನಂತರ ಪ್ರತಿವಾದಿಯ ಜಮೀನು ಆತನ ಸ್ವಾ ಧೀನದಲ್ಲಿ ಇರುತ್ತದೆ. ಪ್ರತಿವಾದಿ ನನಗೆ ಯಾವುದೇ ಹಣವನ್ನು ಕೇಳಿಲ್ಲ ಮತ್ತು ನಾನು ಪ್ರತಿವಾದಿಗೆ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದುಡಿದ ಹಣ ನಮ್ಮ ಮನೆತನಕ್ಕೆ ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಣ

ಕೊಡುವಷ್ಟು ನನಗೆ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಾನು ನೋಟೀಸನ್ನು ತಡವಾಗಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಹಾಗೂ ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಸುರಪೂರ**